exceeded their limits.

(INTERRUPTIONS)

(ಈ ಹಂತದಲ್ಲಿ ಡಿ.ಕೆ.ಶಿವಕುಮಾರ್‌ರವರು ಸದನದ ಬಾವಿಗೆ ಬಂದರು)

ಅಧ್ಯಕ್ಷರು: ಮಾನ್ಯ ಸಿಂಧ್ಯರವರೆ ಅದು ಗೊತ್ತಾಗಬೇಕು. ನಾನು ಏನು ಹೇಳುತ್ತೇನೆಂದರೆ ಎಷ್ಟು ಅಪಪ್ರಚಾರಗಳು ಬಂದಿವೆ, ಎಷ್ಟೆಷ್ಟು ಪತ್ರಿಕೆಗಳು ನಿಮ್ಮ ಬಗ್ಗೆ ಎಷ್ಟೆಷ್ಟು ಹೀನವಾಗಿ ಬರೆದಿದೆ ಎನ್ನುವುದು ಗೊತ್ತಿದೆ. ನೀವು, ನಿಮ್ಮ ಮನೆಯವರು, ನಿಮ್ಮ ಮಕ್ಕಳು ಎಷ್ಟು ಸಫರ್ ಆಗಿರುತ್ತೀರಿ ಎನ್ನುವುದು ಗೊತ್ತಿದೆ. The same thing has happened to me. ಇವರು ಮಾತ್ರ ದೊಡ್ಡ ಮನುಷ್ಯರುಗಳು ಎಲ್ಲವನ್ನೂ ಮಾಡಿಬಿಟ್ಟು ಇಷ್ಟು ಮಾಡಿಬಿಟ್ಟು ಮನೆಗಳಲ್ಲಿ ಕುಳಿತುಕೊಳ್ಳುತ್ತಾರಲ್ಲಾ ಇವರ ಹೆಸರುಗಳಾದರೂ ಜನರಿಗೆ ಗೊತ್ತಾಗಲಿ ಇವರು ಯಾರು ದೊಡ್ಡಮನುಷ್ಯರು ಎಂದು. ಅವರ ಹೆಂಡತಿಯ ಮಕ್ಕಳಿಗೂ ಕೂಡ ಈ ನೋವು ಗೊತ್ತಾಗಲಿ. ನಮ್ಮ ಮಕ್ಕಳು ಶಾಲೆಗೆ ಹೋದರೆ ಇಂಥವರ ಮಕ್ಕಳು ಎಂದು ಹೇಳಿಕೊಂಡು ಹೆದರಿ ಬದುಕುವಂತಹ ಕಾಲ ಬಂದಿದೆ. ನಾವು ಒಂದು ಸೋಷಿಯಲ್ ಫಂಕ್ಷನ್‌ಗೆ ಹೋಗಬೇಕಾದರೆ ರಾಜಕಾರಣಿಗಳಾದ ನಾವು ತಲೆಯನ್ನು ಪಕ್ಕಕ್ಕೆ ಇಟ್ಟುಕೊಂಡು ಹೋಗಬೇಕಾದಂತಹ ಪರಿಸ್ಥಿತಿಯು ಬಂದಿದೆ. ಯಾರು ಅಧಿಕಾರಿಗಳು ಮಾಡಿದ್ದಾರೆ ಅವರ ಹೆಸರು ಅವರ ಜಾತಕ ಈಚೆಗೆ ಬರಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಇವರು ಒತ್ತಡವನ್ನು ತಂದು ಅಧಿಕಾರಿಗಳ ಕೈಯಲ್ಲಿ ಮಾಡಬಾರದ್ದನ್ನು ಮಾಡಿಸುತ್ತಿದ್ದಾರೆ. ಜನ ಛೀಮಾರಿಯಾಕಬೇಕಾಗಿರುವುದು ಈ ಸರ್ಕಾರಕ್ಕೆ. ಅಧಿಕಾರಿಗಳು ಅವರು ಹೇಳಿದ ಹಾಗೆ ಕೇಳದಿದ್ದರೆ ಅಲ್ಲಿ ಕುಳಿತುಕೊಳ್ಳುವುದಕ್ಕೆ ಆಗದಂತಹ ದುಸ್ಥಿತಿಗೆ ಬಂದು ಬಿಟ್ಟಿದ್ದಾರೆ.

MR. SPEAKER: Why these people are in the well? I didn't see.

(ಗೊಂದಲ)

(ಹಂತದಲ್ಲಿ ಶ್ರೀ ಮುದ್ದಹನುಮೇಗೌಡ ಹಾಗೂ ಶ್ರೀ ನಾರಾಯಣ್‌ರವರು ಸದನದ ಬಾವಿಗೆ ಬಂದರು)

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಸರ್ಕಾರದಿಂದ ಒಂದು ಎಂಡಾರ್ಸ್‌ಮೆಂಟ್ ಹೋಗುತ್ತದೆ. ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಬೆಂಗಳೂರು ದಿನಾಂಕ 26.9.1997ಕ್ಕೆ ಬೇರೆ ಹೋಗುತ್ತದೆ.